431(729) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುರತ್ಕಲ್ ಪ್ರದೇಶ ಬೈಕಂಪಾಡಿ ಗ್ರಾಮದಲ್ಲಿ ಬಿ.ಪಿ.ಸಿ.ಎಲ್. ಮತ್ತಿತರ ಸಂಸ್ಥೆಗೆ ಸ್ವಾಧೀನಪಡಿಸಿಕೊಟ್ಟು ರೈತ ಕುಟುಂಬಗಳಿಗೆ ಮನೆ ನಿವೇಶನವನ್ನು ಒದಗಿಸಿಕೂಡಲಾಗಿದೆಯೇ.

ಆ) ಸಂಸ್ಥೆಗೆ ತಮ್ಮ ಭೂಮಿಯನ್ನು ಬಿಟ್ಟು ಕೊಟ್ಟು ನಿರ್ವಸಿತರಾಗಿರುವ ಬಡಜನರಿಗೆ ಮನೆ ನಿವೇಶನವನ್ನು ಕೂಡಲಾಗಿದೆಯೇ.

ಇ) ಇಲ್ಲವಾದಲ್ಲಿ ಕಾರಣಗಳೇನು,

ಈ) ಭೂಸ್ವಾಧೀನತೆಗೆ ಮಾಡಲು ನೀಡಿದ ಭರವಸೆಯಂತೆ ನಿವೇಶನ ನೀಡಲು ಕ್ರಮ ಜರುಗಿಸುವರೆ?

ಶ್ರೀ. ಪಿ.ಜಿ. ಆರ್. ಸಿಂಧ್ಯಾ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಡಳಿಯಿಂದ ಬಿ.ಪಿ.ಸಿ.ಎಲ್.ಸಂಸ್ಥೆಗೆ ಬೈಕಂಪಾಡಿ ಭೂಸ್ವಾಧೀನಪಡಿಸಿದ ಜಮೀನುಗಳಲ್ಲಿ ವಾಸದ ಮನೆಗಳು ಇಲ್ಲದ ಜಮೀನನ್ನು ಸ್ವಾಧೀನಪಡಿಸಿರುವುದರಿಂದ ಭೂಪರಿಹಾರ ಪಾವತಿಸಲಾಗಿದೆ.

ನಾಗಾರ್ಜುನ ಸ್ಟೀಲ್ ಸಂಸ್ಥೆಗೆ ಬೈಕಂಪಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿ ವಸತಿ ಕಳೆದುಕೂಂಡ 43 ಕುಟುಂಬಗಳಿಗೆ ಕುಳಾಯಿ ಪುನರ್ವಸತಿ ಕಲ್ಪಿಸಿಕೂಡಲಾಗಿದೆ.

ಆ) ನಾಗಾರ್ಜುನ ಸ್ಟೀಲ್ ಸಂಸ್ಥೆಗೆ ಬೈಕಂಪಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿ ವಸತಿ ಕಳೆದುಕೂಂಡ 43 ಕುಟುಂಬಗಳಿಗೆ ಕುಳಾಯಿ ಪುನರ್ವಸತಿ ಕಲ್ಪಿಸಿಕೂಡಲಾಗಿದ್ದ , ಈ ಪೈಕಿ 16 ಕುಟುಂಬದವರು ನಿವೇಶನದ ಹಕ್ಕು ಪತ್ರ ಸ್ವೀಕರಿಸಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ನಾಗಾರ್ಜುನ ಸ್ಟೀಲ್ ಸಂಸ್ಥೆಗೆ ಬೈಕಂಪಾಡಿ ಗ್ರಾಮದಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿ ವಸತಿ ಕಳೆದುಕೂಂಡ 43 ಕುಟುಂಬಗಳಿಗೆ ಕುಳಾಯಿ ಪುನರ್ವಸತಿ ಕಲ್ಪಿಸಿಕೂಡಲಾಗಿದು , ಈ ಪೈಕಿ 16 ಕುಟುಂಬದವರು ನಿವೇಶನದ ಹಕ್ಕು ಪತ್ರ ಸ್ವೀಕರಿಸಿರುತ್ತಾರೆ. ಉಳಿದವರಿಗೆ ನಿವೇಶನದ ಹಕ್ಕು ಪತ್ರಗಳನ್ನು 15 ದಿವಸಗಳಲ್ಲಿ ನೀಡಲು ಸೂಕ್ತ ಕ್ರಮ ಕೈಗೂಳ್ಳಲಾಗುವುದು.

432(730) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೇಗಳಿಗೆ ಉತ್ತರಿಸುವರೆ ?

ಅ) ಸುರತ್ಕಲ್ ಕ್ಷೇತ್ರದ ಬೈಕಂಪಾಡಿ ಗ್ರಾಮದಲ್ಲಿ ಬಿ.ಪಿ.ಸಿ.ಎಲ್ ಮತ್ತು ಹೆಚ್.ಪಿ.ಸಿ.ಎಲ್. ಮತ್ತಿತರ ಸಂಸ್ಥೆಗಳಿಗೆ ಭೂಸ್ವಾಧೀನಪಡಿಸಿಕೂಟ್ಟು ಜಮೀನುಗಳ ವೀಸ್ತೀರ್ಣ ಎಷ್ಟು?

ಆ) ಭೂಮಾಲೀಕರಿಗೆ ನಗದಾಗಿ ಕೂಟ್ಟು ಪರಿಹಾರಧನದ ಒಟ್ಟು ಮಾತ್ತ ಎಷ್ಟು ಹಾಗೂ ಜಮೀನಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು

ಇ) ಭೂಸ್ವಾಧೀನಪಡಿಸುವಾಗ ಬೂಮಾಲೀಕರಿಗೆ ಕೊಟ್ಟ ಭರವಸೆಗಳನ್ನು ಹಾಗೂ ಅವುಗಳನ್ನು ಕಾರ್ಯಗತ ಗೊಳಿಸಲಾಗಿದೆಯೇ.

ಈ) ಇಲ್ಲವಾದಲ್ಲಿ ಕಾರಣಗಳೇನು?

ಉ) ಜಮಿನನ್ನು ಕಳೆದುಕೊಂಡ ಅರ್ಹ ರೈತ ಕುಟುಂಬದ ಅಭ್ಯರ್ಥಿಗಳಿಗೆ ಉದ್ಯೋಗ ನೀಡುವ ಭರವಸೆಯನ್ನು ಸಂಸ್ಥೆಗಳಯ ಈಡೇರಿಸಿವೆಯೇ?

ಊ) ಇಲ್ಲವಾದಲ್ಲಿ ಮುಂದಿನ ಕ್ರಮಗಳೇನು.

ಶ್ರೀ ಪಿ.ಜಿ.ಆರ್. ಸಿಂಧ್ಯ ಮಾನ್ಯ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಡಳಿಯಿಂದ ಬೈಕಂಪಾಡಿ ಗ್ರಾಮದಲ್ಲಿ ಈ ಕೆಳಕಂಡಂತೆ ಜಮೀನನ್ನು ಭೂಸ್ವಾಧೀನಪಡಿಸಲಾಗಿದೆ.

	ಖಾಸಗಿ	ಸರ್ಕಾರಿ	ಒಟ್ಟು
ಬಿ.ಪಿ.ಸಿ.ಎಲ್	69.80	2.18	71.18
ಎಂ.ಆರ್.ಪಿ.ಎಲ್	19.84	–	19.84
ನಾಗಾರ್ಜುನ ಸ್ಟೀಲ್	111.91	–	111.91
		ಒಟ್ಟು	**203.73**

ಆ) ಭೂಮಾಲೀಕರಿಗೆ ನಗದಾಗಿ ಪರಿಹಾರವನ್ನು ಕೊಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಬಿ.ಪಿ.ಸಿ.ಎಲ್. ಕಂಪನಿಗೆ ಸ್ವಾಧೀನಪಡಿಸಿದ ಜವೀನಿಗೆ ಪ್ರತಿ ಎಕರೆಗೆ ರೂ.4,10,000–00 ರಂತೆ ಬೆಲೆ ನಿಗಧಿಪಡಿಸಿದ್ದು, ಒಟ್ಟು ರೂ.2,84,71,500–00 ಗಳನ್ನು ಪರಿಹಾರ ಧನವನ್ನು ಪಾವತಿಸಲಾಗಿದೆ.

ಎಂ.ಆರ್.ಪಿ.ಎಲ್. ಕಂಪನಿಗೆ ಪೈಪಲೈನ್ನಾಗಿ ಸ್ವಾಧೀನಪಡಿಸಿದ ಜಮೀನಿಗೆ ಪ್ರತಿ ಎಕರೆಗೆ ರೂ.3,60,000–00 ಗಳಂತೆ ಬೆಲೆ ನಿಗಧಿಪಡಿಸಿದ್ದು, ಒಟ್ಟು ರೂ.71,42,400–00 ಗಳನ್ನು ಪರಿಹಾರಧನವಾಗಿ ಪಾವತಿಸಲಾಗಿದೆ.....

ನಾಗಾರ್ಜುನ ಸ್ಟೀಲ್ ಕಂಪನಿಯವರಿಗೆ ಸ್ವಾಧೀನಪಡಿಸಿದ ಜಮೀನಿಗೆ ಪ್ರತಿ ಎಕರೆಗೆ ರೂ.3,22,000–00 ರಂತೆ ಬೆಲೆ ನಿಗಧಿಪಡಿಸಿದ್ದು ಒಟ್ಟು ರೂ.3,63,37,700–00 ಗಳನ್ನು ಪರಿಹಾರಧನವಾಗಿ ಪಾವತಿಸಲಾಗಿದೆ.

ಇ) ಮಂಡಳಿಯಿಂದ ಭೂಮಾಲೀಕರಿಗೆ ಭೂಪರಿಹಾರ ನೀಡುವುದನ್ನು ಹೊರತುಪಡಿಸಿ, ಬೇರೆ ಯಾವುದೇ ಭರವಸೆಯನ್ನು ನೀಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಉ) ಮೆ: ನಾಗಾರ್ಜುನ ಸಂಸ್ಥೆಯು ಜಮೀನನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ಹಿಂದಿರುಗಿಸಿದೆ.

ಮೆ: ಬಿ.ಪಿ.ಸಿ.ಎಲ್. ಸಂಸ್ಥೆಯು ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ.

ಮೆ: ಎಂ.ಆರ್.ಪಿ.ಸಿ.ಎಲ್. ಸಂಸ್ಥೆಗೆ ಸಂಬಂಧಿಸಿದಂತೆ ವಿವರ ಈ ಕೆಳಕಂಡಂತಿದೆ:–

ಅ) ನೌಕರಿ ನೀಡಿರುವುದು : 148 ಜನರಿಗೆ

ಆ) ನೌಕರಿಯ ಬದಲಾಗಿಪ್ರತಿ ಕುಟುಂಬಕ್ಕೆ
ರೂ. 1.90 ಲಕ್ಷಗಳಂತೆ ಪರಿಹಾರವನ್ನು ನೀಡಿರುವುದು. : 328

ಇ) ಪರಿಹಾರದ ಭಾಗಶ:(ರೂ. 1.5 ಲಕ್ಷ)
ಪಾವತಿಸಿರುವುದು. : 06

ಈ) ಪರಿಹಾರ ಪಡೆದಿಲ್ಲದವರು : 12 ಪ್ರಕರಣ
494

ಊ) ಉದ್ಭವಿಸುವುದಿಲ್ಲ.

433(733) ಶ್ರೀ. ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಜವಳಿ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಎರಡು ವರ್ಷಗಳಲ್ಲಿ ಕೈಮಗ್ಗ ನೇಕಾರರ ಸಾಲವನ್ನು ಮನ್ನಾ ಮಾಡಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಆ) ಒಟ್ಟಾರೆ ಕೈಮಗ್ಗ ಹಾಗೂ ನೇಕಾರರ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು?

ಅ) ಯಾವುದೂ ಇಲ್ಲಾ

ಶ್ರೀ ಸತೀಶ್.ಎಲ್.ಜಾರಕಿ ಹೊಳೆ (ಜವಳಿ ರಾಜ್ಯ ಸಚಿವರು) :

ಆ)

ವರ್ಷ	(ರೂ. ಲಕ್ಷಗಳುಲ್ಲಿ)
2003–04	636.89
2004–05	2405.22

(ದಿನಾಂಕ. 15–1–2005 ರವರೆಗೆ)

434(735) ಶ್ರೀ ಕೃಷ್ಣ ಪಾಲೇಮಾರ್ (ಸುರತಕಲ್) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೇಗಳಿಗೆ ಉತ್ತರಿಸುವರೆ.

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ಒಟ್ಟು ಗೋವುಗಳ ತಳಿಗಳ ಸಂಖ್ಯೆ ಎಷ್ಟು:

ಆ) ಅವುಗಳಲ್ಲಿ ಎಷ್ಟು ಸಂಖ್ಯೆಯ ತಳಿಗಳು ಕ್ಷೀಣಿಸುತ್ತಿರುವುದನ್ನು ಗುರುತಿಸಲಾಗಿದೆ:

ಇ) ಗೋವುಗಳ ತಳಿ ಸಂರಕ್ಷಣೆಗೆ ಸರ್ಕಾರದ ಕಾರ್ಯಕ್ರಮಗಳೇನು?

ಈ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಮತ್ತು ಖಾಸಗಿ ಗೋತಳಿ ಕೇಂದ್ರಗಳು ಕಾರ್ಯಾನಿರ್ವಹಿಸುತ್ತಿವೆ?

ಶ್ರೀ ಮಿರಾಜುದೀನ್ ಎಸ್. ಪಟೀಲ್(ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 2003 ರ ಜಾನುವಾರು ಗಣತಿಯಲ್ಲಿ ಒಟ್ಟು 8 ಗೋ ತಳಿಗಳನ್ನು ರಾಜ್ಯದಲ್ಲಿ ಗುರುತಿಸಲಾಗಿದೆ.

ಆ) ಎಲ್ಲ ಸ್ಥಳೀಯ ಗೋ ತಳಿಗಳ ಸಂಖ್ಯೆ ಕ್ಷೀಣಿಸುತ್ತಿರುವುದು ಗುರುತಿಸಲಾಗಿದೆ.

ಇ) ಪ್ರಮುಖ ದೇಶಿಯ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಖಿಲ್ಲಾರ್ ಮತ್ತು ದೇವಣಿ ಗೋವುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಪ್ರತ್ಯೇಕ ತಳಿ ಅಭಿವೃದ್ಧಿ ಕ್ಷೇತ್ರಗಳನ್ನು ಸ್ಥಾಪಿಸಿ ಈ